**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಪಿ.ಸಿ.ಆರ್. ನಂ. 21364/2021**

**ಸಿಡಬ್ಲ್ಯು-1**

| | |
|---|---|
| **ಸಾಕ್ಷಿದಾರರ ಹೆಸರು** | **ಸೂರಜ್ ಕುಮಾರ ಬಾಲ್ಮಿಕಿ** |
| **ತಂದೆಯ ಹೆಸರು** | **ಜೊಗ್ರಾಜ ಬಾಲ್ಮಿಕಿ** |
| **ವಯಸ್ಸು** | **40 ವರ್ಷ** |
| **ಉದ್ಯೋಗ** | **ಸೀನಿಯರ್ ಇಂಜಿನೀಯರ್** |
| **ವಾಸ** | **ಬಿ. ನಾರಾಯಣಪುರ, ಬೆಂಗಳೂರು** |
| **ಪ್ರಮಾಣೀಕರಿಸಿದ ದಿನಾಂಕ** | **14/12/2022.** |

**ದಂ.ಪ್ರ.ಸಂ.ಕಲಂ. 200 ರಡಿಯಲ್ಲಿ ಪಿರ್ಯಾದಿಯ ಪ್ರಮಾಣ ಪೂರ್ವಕ ಹೇಳಿಕೆಃ**

1 ನೇ ಆರೋಪಿ ಜಯಂತೋ ಬೋರ್ರೈ ನನ್ನ ಪತ್ನಿಯ ದೂರದ ಸಂಬಂಧಿ. 2019 ರ ಮಾರ್ಚ ತಿಂಗಳಲ್ಲಿ ಆತನು ನಮ್ಮ ಮನೆಗೆ ಬಂದು, ಕೆಲವು ದಾಖಲೆಗಳಿಗೆ ಸಹಿ ಮಾಡುವಂತೆ ನನ್ನನ್ನು ಕೇಳಿದ. ಆಗ ನಾನು ಅವಸರದಲ್ಲಿದ್ದರಿಂದ ಆತನನ್ನು ನಂಬಿ ನಾನು ಸಾಕ್ಷಿ ಎಂದು ತಿಳಿದು ದಾಖಲೆಗಳಿಗೆ ಸಹಿ ಮಾಡಿದೆ. ನಂತರ ದಿನಾಂಕ 13/03/2020 ರಂದು ನನಗೆ ಚೆನ್ನೈನ ಮಹೀಂದ್ರಾ ಫೈನಾನ್ಸ ಅವರಿಂದ ಅವರ ವಕೀಲರ ಮೂಲಕ ನೋಟಿಸ್ ಬಂದಿರುತ್ತದೆ. ಸದರಿ ನೋಟಿಸ್ ನ್ನು ನಾನು ಓದಿದ ಮೇಲೆ ಅದರಲ್ಲಿ ಜಯಂತೋ ಬೋರ್ರೈ ಇತನು ಸಾಲ ತೆಗೆದುಕೊಂಡು ಅದರಲ್ಲಿ ನನ್ನನ್ನು ಜಾಮೀನುದಾರನೆಂದು ಮಾಡಿರುವುದು ತಿಳಿಯಿತು. ಆಗ ಆತನು ಸಾಲ ಕಟ್ಟಿಲ್ಲವೆಂದು ಸಹ ತಿಳಿಯಿತು. ಆದುದರಿಂದ ನನಗೆ ಆಶ್ಚರ್ಯವಾಗಿ ನಾನು

ಆತನಿಗೆ ಕರೆ ಮಾಡಿದೆ, ಆಗ ಆತನು ಕಾರು ತೆಗೆದುಕೊಳ್ಳಲು ಸಾಲ ಮಾಡಿದ್ದನೆಂದು ತಿಳಿದು ಬಂತು. ನಾನು ಆತನಿಗೆ ಕರೆ ಮಾಡಿದಾಗ ಆತನು ಆಗಲೇ ಬೆಂಗಳೂರನ್ನು ಬಿಟ್ಟು ಹೋಗಿರುವುದು ಮತ್ತು ತನ್ನ ಸ್ವಂತ ವಿಳಾಸವಾದ ಅಂಡಮಾನಗೆ ಹೋಗಿರುವುದು ತಿಳಿದು ಬಂತು. ನಾನು ಆತನಿಗೆ ಬೆಂಗಳೂರಿಗೆ ಬಂದು ಆತನು ತೆಗೆದುಕೊಂಡಿದ್ದ ಸಾಲವನ್ನು ಮರುಪಾವತಿಸುವಂತೆ ಹೇಳಿದೆ, ಅದಕ್ಕೆ ಆತನು ಒಪ್ಪಿದ. ಆದರೆ ಆ ರೀತಿ ಸಾಲ ಮರುಪಾವತಿ ಮಾಡಲಿಲ್ಲ. ನಾನು ಪದೇ ಪದೇ ಫೋನ ಮಾಡಿದಾಗ ನನ್ನ ಮೇಲೆ ಸಿಟ್ಟಾಗಿ ಅವಾಚ್ಯ ಶಬ್ದಗಳಿಂದ ಬೈದು, ನಿನ್ನ ಕುಟುಂಬಕ್ಕೆ ತೊಂದರೆ ಆಗುತ್ತದೆ ಎಂದು ಹೆದರಿಸಿದ. ನಂತರ ನಾನು ಆತನ ತಂದೆ ವಾಸುದೇವ ಬೊರೈ ಅವರನ್ನು ಸಂಪರ್ಕಿಸಿ, ಈ ಎಲ್ಲ ಸಮಸ್ಯೆಗಳನ್ನು ಅವರಿಗೆ ತಿಳಿಸಿದೆ. ಪ್ರಾರಂಭದಲ್ಲಿ ಅವರು ಸಹ ತನ್ನ ಮಗ ತೆಗೆದುಕೊಂಡಿದ್ದ ಸಾಲವನ್ನು ಮರುಪಾವತಿಸುವುದಾಗಿ ಒಪ್ಪಿದರು, ಆದರೆ ಸಾಲ ಮರುಪಾವತಿ ಮಾಡಲಿಲ್ಲ. ಆದುದರಿಂದ ನಾನು ಜನವರಿ -2021 ರಲ್ಲಿ ಮಹಾದೇವಪುರ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ. ಆದರೆ ಅವರು ಪ್ರಕರಣವನ್ನು ದಾಖಲಿಸದೆ, ಪ್ರಕರಣವು ಸಿವಿಲ್ ಸ್ವರೂಪದ್ದೆಂದು ಹೇಳಿದ್ದರಿಂದ ನಾನು ನ್ಯಾಯಾಲಯಕ್ಕೆ ಬಂದಿದ್ದೇನೆ. ಆದುದರಿಂದ ಆರೋಪಿತರ ವಿರುದ್ದ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು.**)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**